


ಕದ್ರಿ ಗೋಪಾಲನಾಥರ ಕಛೇರಿ



ಶಾಲಾ ಮಕ್ಕಳ ಸಾಂಪ್ರದಾಯಿಕ ನೃತ್ಯ

ಈ ಉಪಾಸಕರು ಸಂಗೀತೋತ್ಸವವನ್ನು ಕಳೆಗಟ್ಟಿಸುತ್ತಾರೆ' ಎಂದು 'ನಾದ ಸುಧಾರಸ' ಯೋಜನೆಯ ಸಂಚಾಲಕ ವಾರಣಾಸಿ ಬಾಲಕೃಷ್ಣ ಭಾಗವತರ್ ಅಭಿಪ್ರಾಯಪಡುತ್ತಾರೆ.

## ಭಕ್ತಿರಸದ ಹೊನಲು

'ಗುರುಪೂಜಾ ಸಂಗೀತ ಉತ್ಸವ'ದಲ್ಲಿ ಹಿಂದೂಸ್ತಾನಿ, ಕರ್ನಾಟಕ ಸಂಗೀತಗಳ ಜುಗಲಬಂದಿ ನಡೆಯುತ್ತದೆ. ನಾದಸ್ವರ, ಪಿಟೀಲು ವಾದನಗಳ ಜೊತೆಗೆ ಭರತನಾಟ್ಯ, ಕೂಚುಪುಡಿ ನೃತ್ಯ ಪ್ರದರ್ಶನಗಳು ನಡೆಯುತ್ತವೆ. ಹರಿಕಥೆ, ಬುರ್ರಕಥೆಗಳಿಗೂ ಇಲ್ಲಿ ವೇದಿಕೆಯುಂಟು. ಸ್ವರೂಪ ಯಾವುದಾದರೂ ಎಲ್ಲದರ ಸ್ಥಾಯಿಭಾವ ಒಂದೇ – ಭಕ್ತಿರಸ ಹಾಗೂ ಕೈವಾರ ನಾರೇಯಣರು.

ನೂರಾ ಎಪ್ಪತ್ತೈದು ವರ್ಷಗಳ ಹಿಂದೆ ಕೈವಾರದಲ್ಲಿ ಜನಿಸಿ, ಅಲ್ಲಿಯೇ ಜೀವಸಮಾಧಿಯಾದ ನಾರೇಯಣಪ್ಪ ಅವರು ಭಕ್ತಿಯ ತಳಹದಿಯಲ್ಲಿ ಜನಸಾಮಾನ್ಯರ ಭಾವನೆಗಳಿಗೆ ಸ್ಪಂದಿಸಿದವರು. ಕೀರ್ತನೆ, ತತ್ವಪದ, ಯಾಲಪದ, ಕೋಲಾಟ ಪದ ಸೇರಿದಂತೆ ಹಲವು ಪ್ರಕಾರಗಳನ್ನು ನಾರೇಯಣಪ್ಪನವರು ತಮ್ಮ ಅಭಿವ್ಯಕ್ತಿಗೆ ಬಳಸಿಕೊಂಡರು. ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಬರೆದ ಅವರು, ಎರಡು ಭಾಷೆಗಳನ್ನು ಒಟ್ಟುಮಾಡಿ ಬರೆದಿರುವುದೂ ಇದೆ.

ನೋವಿಗೆ ಸಾಂತ್ವನ ಹೇಳುವ, ಬದುಕಿಗೆ ಧೈರ್ಯ ತುಂಬುವ ನಾರೇಯಣರ ರಚನೆಗಳು ಹಳ್ಳಿಗಾಡಿನ ಅಸಹಾಯಕನ ಜನರ ಪಾಲಿಗೆ ದಾರಿದೀವಿಗೆಗಳಂತಿವೆ. ಆಡುಮಾತಿನಲ್ಲಿನ ಈ ರಚನೆಗಳ ಒಳನೋಟ ಸುಲಭಕ್ಕೆ ದಕ್ಕುವಂತಹದ್ದೇನಲ್ಲ. ನಾರೇಯಣರ ಅನೇಕ ಮಾತುಗಳು ಜನರ ಮಾತುಗಳಲ್ಲಿ ಸೇರಿಹೋಗಿ ಜಾನಪದವೇ ಆಗಿರುವುದು ಅವರೆಷ್ಟು ಜನಮುಖಿಯಾಗಿದ್ದರು ಎನ್ನುವುದನ್ನು ಸೂಚಿಸುವಂತಿದೆ. ಇಂಥ ಅನನ್ಯ ಸಂತನಿಗೆ ನಾದಸುಧೆಯ ಮೂಲಕ ಗೌರವಿಸುವ ಸಂದರ್ಭವೇ 'ಗುರುಪೂಜಾ ಸಂಗೀತ ಉತ್ಸವ'.

ನಾರೇಯಣರ ಸನ್ನಿಧಿಗೆ ಯಾವಾಗ ಹೋದರೂ ಅಲ್ಲಿ ನಾದದಲೆಯೊಂದು ತನ್ನ ಪಾಡಿಗೆ ತಾನು ಅನುರಣಿಸುತ್ತಿರುತ್ತದೆ. 'ಯಾರು ಕೇಳಲಿ ಎಂದು ನಾನು